# 2014-15 ನೇ ಸಾಲಿಗೆ ಆಯ್ಕೆಯಾದ ಹಾವೇರಿ ಜಿಲ್ಲೆಯ ಯುವ ಕೃಷಿಕ

## ಆವಿಷ್ಕಾರ ಮಾಡಿದ ಯುವ ಕೃಷಿಕ



**ಶ್ರೀ ಮಾಲತೇಶ ಪ್ರಕಾಶ ವಡ್ನಿಕೊಪ್ಪ**
ಗ್ರಾಮ: ಕರಜಗಿ
ತಾ: ಹಾವೇರಿ
ಜಿ: ಹಾವೇರಿ ಮೊ: 9742582068

ಕೃಷಿಯನ್ನು ಲಾಭದಾಯಕವನ್ನಾಗಿ ಮಾಡಿಕೊಂಡು ಇತರರಿಗೆ, ಮಾದರಿಯಾದ ರೈತರು ಬೆರಳೆಣಿಕೆಯಷ್ಟು ಮಾತ್ರ. ಇಂತಹ ಮಾದರಿಯ ರೈತರಲ್ಲಿ ಒಬ್ಬರು ಹಾವೇರಿ ತಾಲ್ಲೂಕಿನ ಕರ್ಜಗಿ ಗ್ರಾಮದವರಾದ ಮಾಲತೇಶ ಪ್ರಕಾಶ ವಡ್ನಿಕೊಪ್ಪರವರು ತಮ್ಮ 13.35 ಎಕರೆ ಜಮೀನಿನಲ್ಲಿ ಕೃಷಿ ಬೆಳೆಗಳಾದ ಹತ್ತಿ, ಸೋಯಾಬೀನ್, ಅಲಸಂದಿ, ಶೇಂಗಾ, ತೊಗರಿ, ಗುರೆಳ್ಳು, ಸಾಸಿವೆ, ನವಣೆ, ಸಾವಿ, ಗೋವಿನಜೋಳ ಹಾಗೂ ತೋಟಗಾರಿಕೆಯಲ್ಲಿ ಪೇರಲ, ಚಿಕ್ಕು, ತೇಗ, ತೆಂಗು ಶೇಂಗಾವನ್ನು ಲಾಭದಾಯಕವಾಗಿ ಬೆಳೆಯುವುದರ ಜೊತೆಗೆ ತರಕಾರಿ ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ. ಸಂಪೂರ್ಣವಾಗಿ ಕೃಷಿಯಲ್ಲಿ ತೊಡಗಿಸಿಕೊಂಡು ಇವರು ತೇಗಿನ ಗಿಡ ಸಾಗವಾನಿ ಗಿಡಗಳನ್ನು ಬದುಗಳ ಮೇಲೆ ಬೆಳೆಸಿದ್ದಾರೆ. ಇವರು ಪ್ರತಿ ವರ್ಷ 4 ರಿಂದ 6 ಲಕ್ಷದವರೆಗೂ ಆದಾಯ ಪಡೆಯುತ್ತಾರೆ. ಇವರು ಕೃಷಿಗೆ ಬೇಕಾದ ಯಂತ್ರೋಪಕರಣಗಳನ್ನು ಸಹ ಹೊಂದಿದ್ದಾರೆ.